

## ಮತ್ತೆ ಅದೇ ರಾಮಾಯಣ !

"ಭಾರತದೇಶದಿಂದ ಧರ್ಮ ಅಳಿದರೆ ಇಡೀ ಪ್ರಪಂಚವೇ ಅಳಿಯುವುದು" ಎಂದು ಸ್ವಾಮಿ ವಿವೇಕಾನಂದರು ಒಮ್ಮೆ ಉದ್ಗರಿಸಿದರು. ಪ್ರಸ್ತುತ ಭಾರತದ ಸ್ಥಿತಿಯನ್ನು ನೋಡಿದಾಗ ಈ ಹೇಳಿಕೆ ಎಷ್ಟು ಸಮಂಜಸ ಎಂದು ಮೇಲ್ನೋಟಕ್ಕೆ ಅನ್ನಿಸಬಹುದು. ಆದರೆ ಸನಾತನಧರ್ಮಕ್ಕೆ ಸಂಬಂಧಿಸಿದಂತೆ ಕೆಲವೊಮ್ಮೆ ಹಠಾತ್ ಘಟನೆಗಳೂ ಸಂಭವಿಸುತ್ತಲೇ ಇರುತ್ತವೆ.

ಜೂನ್ ೨೦ನೇ ದಿನಾಂಕದ *The Week* ಎಂಬ ಇಂಗ್ಲಿಷ್ ವಾರಪತ್ರಿಕೆಯಲ್ಲಿ ಅತ್ಯಾಧುನಿಕ 'ರಾಮಭಕ್ತ'ನ ಕತೆಯಿದೆ. ಅಶೋಕ್ ಬ್ಯಾಂಕರ್ ಎನ್ನುವವನೊಬ್ಬ ಲೇಖಕ. ಅವನಿಗೆ ೩೯ ವರ್ಷ ವಯಸ್ಸು. ಮುಂಬೈಯಲ್ಲಿ ವಾಸ. ಬರೆಯುವುದು ಹವ್ಯಾಸ. ಹಲವಾರು ಕಾದಂಬರಿಗಳನ್ನು ಆಂಗ್ಲಭಾಷೆಯಲ್ಲಿ ಬರೆದಿದ್ದಾನೆ. ಅವನ ಕಥೆಗಳು ಜರ್ಮನ್, ಫ್ರೆಂಚ್ ಭಾಷೆಗಳಿಗೂ ಅನುವಾದಿಸಲ್ಪಟ್ಟಿವೆ. ಈಗ ಅವನು ೭ ಸಂಪುಟಗಳಲ್ಲಿ ರಾಮಾಯಣವನ್ನು ಬರೆಯುತ್ತಿದ್ದಾನೆ. ಇವುಗಳಲ್ಲಿ ಕೊನೆಯ ಎರಡು ಸಂಪುಟಗಳು ೯೦೦ ಪುಟಗಳನ್ನು ಹೊಂದಿರುತ್ತವೆಯಂತೆ ! ಅಮೆರಿಕ ಹಾಗೂ ಇಂಗ್ಲೆಂಡಿನಲ್ಲಿ ಆಗಲೇ ಮೊದಲ ಸಂಪುಟ *Prince of Ayodhya* ಮಾರುಕಟ್ಟೆಗೆ ಬಂದಿದೆ. ಪ್ರಕಾಶಕರು ಈ ಗ್ರಂಥಕ್ಕೆ ಅವನಿಗೆ ಕೊಟ್ಟಿರುವ ಮುಂಗಡ ಹಣ ರೂ.೧೦ ಕೋಟಿ. ಭಾರತೀಯ ಲೇಖಕನೊಬ್ಬ ಪಡೆಯುತ್ತಿರುವ ಅತ್ಯಧಿಕ ಮುಂಗಡ ಹಣ ಇದಾಗಿದೆಯಂತೆ. ಅವನ ಹಸ್ತಪ್ರತಿಯನ್ನು ಓದಿದ ಅವನ ಸ್ನೇಹಿತನೊಬ್ಬನು ಅವನಿಗೆ ಹೇಳಿದ, "ನೀನು ರಾಮಾಯಣ ನಡೆದಾಗ ಇದ್ದಂತೆ ಎಲ್ಲವನ್ನೂ ವಿವರಿಸುತ್ತೀ" ಎಂದು. ಅದಕ್ಕೆ ನಗುತ್ತಾ ಬ್ಯಾಂಕರ್ ಉತ್ತರಿಸುತ್ತಾನೆ, "ಬಹುಶಃ ನಾನು ಇದ್ದೆ. ಇದನ್ನು ಬರೆಯಲಿಕ್ಕೆ ಪ್ರಾರಂಭಿಸಿದ ದಿನದಿಂದ ನಾನು ಮದ್ಯವನ್ನು ಮುಟ್ಟಲಾಗುತ್ತಿಲ್ಲ. ಪ್ರತಿದಿನ ಆಂಜನೇಯರ ದೇವಸ್ಥಾನಕ್ಕೆ ಹೋಗುತ್ತೇನೆ. ರಾಮಾಯಣ ಬರೆಯುವಾಗ ಬಿಳಿ ಬಟ್ಟೆಯನ್ನು ಮಾತ್ರ ಧರಿಸುತ್ತೇನೆ."

೨೦೦೫ರ ಕೊನೆಯ ಹೊತ್ತಿಗೆ ರಾಮಾಯಣದ ಎಲ್ಲ ಸಂಪುಟಗಳೂ ಪ್ರಕಟವಾಗಲಿವೆ. ಮುಂದಿನ ಆಸೆ ಮಹಾಭಾರತವನ್ನು ಬರೆಯುವುದು. ಇದು ೧೫ ಸಂಪುಟಗಳನ್ನೊಳಗೊಂಡಿರುತ್ತದೆ. ೨೦೦೪ರಲ್ಲಿ ಬರವಣಿಗೆ ಪ್ರಾರಂಭವಾಗಲಿದೆ. **ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ। ತಾವತ್ ಶ್ರೀರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥** "ಈ ಭೂಮಿಯ ಮೇಲೆ ಪರ್ವತಗಳು, ನದಿಗಳು ಎಲ್ಲಿಯವರೆಗೆ ಇರುವವೋ ಅಲ್ಲಿಯವರೆಗೆ ಶ್ರೀರಾಮಾಯಣ ಕಥೆಯು ಪ್ರಪಂಚದಲ್ಲಿ ಪ್ರಚಲಿತವಾಗಿರುತ್ತದೆ"– ಎಂದು ರಾಮಾಯಣದಲ್ಲಿಯೆ ಉಕ್ತವಾಗಿರುವ ಮಾತು ಎಷ್ಟು ಸತ್ಯ ಎಂಬುದು ನಮಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ❖

## ಸುಖಕ್ಕಾಗಿ ದುಃಖ

**ಸುಖಂ ಶೇಥೇ ಸತ್ಯವಕ್ತಾ ಸುಖಂ ಶೇತೇ ಮಿತವ್ಯಯಿ ।**
**ಹಿತಭುಕ್ ಮಿತಭುಕ್ ಚೈವ ತಥೈವ ವಿಜಿತೇಂದ್ರಿಯಃ ॥**

"ಸತ್ಯವಂತನೂ ಮಿತವ್ಯಯಿಯೂ ಹಿತಮಿತವಾಗಿ ಉಣ್ಣುವವನೂ ಜಿತೇಂದ್ರಿಯನೂ ಸುಖವಾಗಿ ನಿದ್ರಿಸುತ್ತಾರೆ," ಎಂದು ಒಂದು ಸಂಸ್ಕೃತ ಸುಭಾಷಿತ ಹೇಳುತ್ತದೆ.

ಈಗ ಸುಖಕ್ಕಾಗಿ ಎಲ್ಲರೂ ಹಾತೊರೆಯುವವರೆ ! ಎಲ್ಲರೂ ಆ ಮಾಯಾ ಮರೀಚಿಕೆಯ ಬೆನ್ನುಹತ್ತಿ ಹೋಗುತ್ತಾರೆ—ರಾಮನು ಮಾಯಾಜಿಂಕೆಯನ್ನು ಅರಸಿಕೊಂಡು ಹೋದಂತೆ. ಆದರೆ ಆ ಜಿಂಕೆ ನಮ್ಮನ್ನು ನಮ್ಮ ನೆಲೆಯಿಂದ ಬಹುದೂರ ಕರೆದುಕೊಂಡು ಹೋಗುತ್ತದೆಯೇ ಹೊರತು, ನಮಗೆಟುಕುವುದೇ ಇಲ್ಲ. ನಮ್ಮ ನೆಲೆಯಿಂದ ದೂರವಾಗುವುದು ಎಂದರೆ ದುಃಖವನ್ನು ಪಡೆಯುವುದೇ. ಆದ್ದರಿಂದ ಸುಖವನ್ನು ಅರಸುತ್ತ ನಾವು ದುಃಖವನ್ನು ಪಡೆಯುತ್ತೇವೆ ! ಎಂಥ ವಿಪರ್ಯಾಸ.

ಅನೇಕರು ಸುಖದ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಅನೇಕ ಮನಶ್ಶಾಸ್ತ್ರಜ್ಞರು, ಆಧ್ಯಾತ್ಮಿಕ ಗುರುಗಳು ಸುಖವನ್ನು ಪಡೆಯುವ ಅನೇಕಾನೇಕ ವಿಧಾನಗಳನ್ನು ಹೇಳುತ್ತಲೇ ಇದ್ದಾರೆ. ವಿಜ್ಞಾನ ಮತ್ತು ತಾಂತ್ರಿಕತೆ ಜನರ ಸುಖಜೀವನಕ್ಕೆ ಬೇಕಾದ ಎಲ್ಲವನ್ನೂ ಒದಗಿಸುತ್ತಿದೆ. ಆದರೂ ಸುಖಕ್ಕಾಗಿ ದುಃಖಪಡುವುದು ನಿಂತಿಲ್ಲ.

ಇತ್ತೀಚೆಗೆ ಎದ್ ಡೀನರ್ (Ed Diener) ಎಂಬುವವರು ಸುಖದ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ತುಂಬ ಸುಖಪುರುಷರನ್ನು (very happy people - VHP) ಅವರು ಅಧ್ಯಯನ ಮಾಡಿ ಸುಖದ ಮುಖ್ಯ ಕಾರಣಗಳನ್ನು ಅವರು ಕಂಡುಹಿಡಿದಿದ್ದಾರೆ. "ಆರೋಗ್ಯ, ರಚನಾತ್ಮಕತೆ, ಉತ್ಪಾದಕತೆ ಮತ್ತು ಪರಹಿತಾಸಕ್ತಿ (altruism)—ಇವು ಸುಖಪುರುಷರಲ್ಲಿ ಅಧಿಕವಾಗಿರುತ್ತವೆ" ಎನ್ನುತ್ತಾರೆ ಅವರು.

ಆದರೆ ಎಡ್ ಡೀನರ್ ಕೂಡ "ಇದರಿಂದಲೇ ಸುಖ"ವೆಂದು ನಿರ್ದಿಷ್ಟವಾಗಿ ಏನನ್ನೂ ಹೇಳುವುದಿಲ್ಲ. ತಾನೆಷ್ಟು ಸುಖಿ ಎಂದು ಕಂಡುಹಿಡಿಯುವುದಕ್ಕೆ ಕೆಲವು ಸೂಚನೆಗಳನ್ನು ನೀಡುತ್ತಾರೆ, ಅಷ್ಟೇ. (ನೋಡಿ *Readers' Digest*, June, 2003)

'ಸುಖ' ಎಂಬ ಪದದಲ್ಲಿಯೆ ಸುಖದ ಮೂಲಸೂತ್ರ ಅಡಗಿದೆ. 'ಸು' ಎಂದರೆ ಸರಿಯಾದ, ಯುಕ್ತವಾದ ಎಂದು, 'ಖ' ಎಂದರೆ ಆಕಾಶ. ಮೇಲಿನ ಶ್ಲೋಕವು ಸೂಚಿಸುವಂತೆ ಸರಿಯಾದ ಜೀವನ ನಡೆಸುತ್ತ, ಆಕಾಶದಂತೆ ವಿಶಾಲ ಮನೋಭಾವವನ್ನು ಹೊಂದಿದ್ದರೆ ಸುಖಪ್ರಾಪ್ತಿಯಾಗುತ್ತದೆ. ಸಾರಥಿಯ ಪಳಗಿಸದ ಕುದುರೆಗಳಂತೆ (**ದುಷ್ಟಾಶ್ವ ಇವ ಸಾರಥೇಃ**) ಇಂದ್ರಿಯಗಳು ದುಷ್ಟವಾಗಿದ್ದರೆ (ದುಃ = ದುಷ್ಟ, ಖ = ಇಂದ್ರಿಯ) ದುಃಖಪ್ರಾಪ್ತಿಯಾಗುತ್ತದೆ. ❖